ಇಲ್ಲಿ ಎಷ್ಟು ರೊಕ್ಕ ಬಿಡುಗಡೆ ಮಾಡಿದ್ದೇವೆಂದು ಹೇಳುತ್ತಾರೆ ಹಾಗಾದರೆ, ರೊಕ್ಕ ಎಲ್ಲಿ ಹೋಯಿತು? ಅದಕ್ಕೋಸ್ಕರ, ದಯವಿಟ್ಟು ಹೇಳಬೇಕು ಆ ರಸ್ತೆಗಳನ್ನು ಕೂಡಲೇ ರಿಪೇರಿ ಮಾಡಿಕೊಡುತ್ತೇವೆಂದು ಹೇಳಬೇಕಾಗುತ್ತದೆ

**ಶ್ರೀ ಎಂ ಪಿ ಪ್ರಕಾಶ್** – ಖಂಡಿತವಾಗಿಯೂ ಕೂಡ ಆ ರಸ್ತೆ ರಿಪೇರಿಗೆ ಸಂಬಂಧಿಸಿದಂತೆ ನಾನು ಕ್ರಮ ಕೈಗೊಳ್ಳುತ್ತೇನೆ ಮತ್ತು ಉತ್ತರ ವಲಯದ Chief Engineer ಗೆ ಆ ವಿಷಯ ತಿಳಿಸುತ್ತೇನೆ

**ಹಲಬರ್ಗಾ ಗ್ರಾಮಕ್ಕೆ 220 ಕೆ ವಿ ವಿದ್ಯುತ್ ಘಟಕದ ಮಂಜೂರಾತಿಯ ಬಗ್ಗೆ**

**284 (2077) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ)** – ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಲ್ಕಿ ಕ್ಷೇತ್ರದ ಹಲಬರ್ಗಾ ಗ್ರಾಮಕ್ಕೆ 220 ಕೆ ವಿ ವಿದ್ಯುತ್ ಘಟಕ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಮಂಜೂರಾಗಿದ್ದಲ್ಲಿ, ಈ ವಿದ್ಯುತ್ ಘಟಕದ ಕೆಲಸ ಯಾವಾಗ ಪ್ರಾರಂಭಿಸಲಾಗುವುದು,

ಇ) ಕೆಲಸ ಪ್ರಾರಂಭಿಸಿದ್ದರೆ ಕಾಮಗಾರಿ ಯಾವ ಹಂತದಲ್ಲಿದೆ,

ಈ) ಪ್ರಾರಂಭಿಸಲ್ಪಟ್ಟ ಕೆಲಸ ಈ ವರ್ಷ ಪೂರ್ತಿಗೊಳಿಸಿ ಅಲ್ಲಿಯ ಜನರಿಗೆ ವಿದ್ಯುತ್ ಸೌಕರ್ಯ ದೊರಕಿಸಿ ಕೊಡಲಾಗುವುದೇ?

**ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)**

ಅ) ಹೌದು, ಬಂದಿದೆ

ಆ) ಈ ಉದ್ದೇಶಿತ ವಿದ್ಯುತ್ ಉಪ ಕೇಂದ್ರದ ಸ್ಥಾಪನೆಗೆ ತಾಂತ್ರಿಕ ಸಲಹಾ ಸಮಿತಿಯು ದಿನಾಂಕ 05 10 2005 ರಲ್ಲಿ ಅನುಮೋದನೆ ನೀಡಿರುತ್ತದೆ ಕಾಮಗಾರಿಯ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದ ಕೂಡಲೇ ಇದಕ್ಕೆ ಬೇಕಾಗುವ ಭೂಮಿಯನ್ನು ಸ್ವಾಧೀನಪಡಿಸಿಕೊಂಡ ನಂತರ ಟೆಂಡರಿಂಗ್ ಪ್ರಕ್ರಿಯೆ ಪೂರ್ಣಗೊಳಿಸಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು

ಇ) ಕಾಮಗಾರಿ ಪ್ರಾರಂಭವಾಗಿರುವುದಿಲ್ಲ

ಈ) (ಅ) ಭಾಗದ ಉತ್ತರದ ಹಿನ್ನೆಲೆಯಲ್ಲಿ ಉದ್ಭವಿಸುವುದಿಲ್ಲ

**ಶ್ರೀ ಪ್ರಕಾಶ್ ಖಂಡ್ರೆ** – ದಿನಾಂಕ 5 10 07 ರಲ್ಲಿ ಒಂದು ವಿದ್ಯುತ್ ಉಪ ಕೇಂದ್ರ ಸ್ಥಾಪನೆಗೆ ಅನುಮೋದನೆ ನೀಡಿರುತ್ತಾರೆ ಆದರೆ, 2007 ರಲ್ಲಿ ನಾವು ಕರ್ನಾಟಕದ ಗಡಿ ಭಾಗದಲ್ಲಿರುವವರು ಪಕ್ಕದ ಮಹಾರಾಷ್ಟ್ರ ರಾಜ್ಯದ ಗಡಿ ಭಾಗದಲ್ಲಿದ್ದೇವೆ ಹಾಗಾಗಿ, ನಮಗೆ ಮೊದಲು ಕರೆಂಟ್ ಸರಿಯಾಗಿ ಬರುವುದಿಲ್ಲ, ಸರಿಯಾಗಿ ಸಿಗುವುದಿಲ್ಲ ಇಂತಹ ಪರಿಸ್ಥಿತಿಯಲ್ಲಿ 2005 ರಲ್ಲಿ ಅನುಮೋದನೆ ಸಿಕ್ಕಿ, 2007 ಆದರೂ ಇನ್ನೂ administrative approval ಸಿಕ್ಕಿಲ್ಲ 'Administrative approval ಸಿಕ್ಕಿದ ನಂತರ ನಾವು ಜಮೀನು ಖರೀದಿಸುತ್ತೇವೆ ಅನಂತರ ಟೆಂಡರ್ ಕರೆಯುತ್ತೇವೆ' ಎನ್ನುತ್ತಾರೆ ಈ ಎಲ್ಲಾ ಪ್ರಕ್ರಿಯೆ ಆಗಬೇಕಾದರೆ, ಬಹಳಷ್ಟು ವರ್ಷವಾಗುತ್ತದೆ ಹಾಗಾಗಿ, ಮಾನ್ಯ ಮಂತ್ರಿಗಳಲ್ಲಿ ನಾನು ವಿಶೇಷವಾಗಿ ವಿನಂತಿಸಿಕೊಳ್ಳುತ್ತೇನೆ ತಾವು ನಿಖರವಾಗಿ ಇದಕ್ಕೆ administrative approval ಯಾವಾಗ ಕೊಡುತ್ತೀರಿ? ಮತ್ತು ಕಾಮಗಾರಿಯನ್ನು ಯಾವಾಗ ಚಾಲೂ ಮಾಡುತ್ತೀರಿ? ಇದಕ್ಕೆ ಉತ್ತರ ಸಿಕ್ಕಿದರೆ, ಮಹಾರಾಷ್ಟ್ರದ ಗಡಿ ಭಾಗ ಹಾಗೂ ಉತ್ತರ ಕರ್ನಾಟಕದ ಕೊನೆಯಲ್ಲಿ ನಮ್ಮ ತಾಲ್ಲೂಕು ಇರುವುದರಿಂದ ಮಹಾರಾಷ್ಟ್ರ ಮತ್ತು ಕರ್ನಾಟಕದ ನಡುವೆ ಬಹಳಷ್ಟು ಸಮಸ್ಯೆಗಳಿವೆ ಮಹಾರಾಷ್ಟ್ರ ರಾಜ್ಯಕ್ಕೆ ಸೇರಿರುವ ಗಡಿ ಭಾಗಗಳಲ್ಲಿ ಕರೆಂಟ್ ಸರಿಯಾಗಿ ಸಿಗುತ್ತದೆ ಆದರೆ, ಕರ್ನಾಟಕದ ಗಡಿ ಭಾಗದಲ್ಲಿರುವ ನಮಗೆ ಸಿಗುವುದಿಲ್ಲ ಅವರು ನೀರನ್ನು ಸರಿಯಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ ನಮಗೆ ಕುಡಿಯುವ ನೀರಿನ ಸಮಸ್ಯೆ ಇದೆ ಹಾಗಾಗಿ, ಗಡಿ ಭಾಗದಲ್ಲಿರುವ ನಮಗೆ ವಿಶೇಷವಾಗಿ, ನಿಖರವಾಗಿ ಕಾಮಗಾರಿ ಚಾಲೂ ಮಾಡುತ್ತೇವೆಂಬ ಉತ್ತರ ಕೊಟ್ಟರೆ ಒಳ್ಳೆಯದು

**ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು)** – **(ಲೋಕೋಪಯೋಗಿ ಪರವಾಗಿ)** ಸನ್ಮಾನ್ಯ ಅಧ್ಯಕ್ಷರೆ, ನಿಜವಾಗಿಯೂ ಕೂಡ ಬಹಳ ಉತ್ತಮವಾಗಿ ಅಲ್ಲಿನ ಜನರ ಸಂಕಷ್ಟಗಳ ಬಗ್ಗೆ ಮಾತನಾಡಿದ್ದಾರೆ ಈಗಾಗಲೇ ತಾಂತ್ರಿಕ ಮಂಜೂರಾತಿಯನ್ನು

ತಾವು ಹೇಳಿದಂತೆ ದಿನಾಂಕ 5 10 2005 ಕ್ಕೆ ಕೊಟ್ಟು, 76 ಕೋಟಿ ರೂಪಾಯಿಗಳನ್ನು ಬರೀ ಉಪ ಕೇಂದ್ರಗಳಿಗೆ ಅಂದಾಜು ಮಾಡಲಾಗಿದೆ ಉಪ ಕೇಂದ್ರದ ನಿರ್ಮಾಣಕ್ಕಾಗಿಯೇ 3,789 ಲಕ್ಷ ರೂಪಾಯಿಗಳನ್ನು ಬೇರೆ ಇಟ್ಟಿದ್ದೇವೆ ಈ ರೀತಿ ವಿವಿಧ ಬಾಬುಗಳಲ್ಲಿ ಖರ್ಚು ಮಾಡುವುದಕ್ಕೆ 4 ಎಕರೆ 3 ಗುಂಟೆ ಜಮೀನು ಅದಕ್ಕೆ ಅಗತ್ಯವಾಗಿತ್ತು ಆ ಜಮೀನಿಗಾಗಿ 60 ಸಾವಿರ ರೂಪಾಯಿಗಳಿಗೆ ಒಂದು ಎಕರೆಯಂತೆ 3 ವರ್ಷದ ಸರಾಸರಿ ತೆಗೆದುಕೊಂಡು 20,031 ರೂಪಾಯಿಯಂತೆ ಜಿಲ್ಲಾಧಿಕಾರಿಗಳು ಅದನ್ನು ಮಾಡಿದರು ಅಲ್ಲಿಯ ರೈತರುಗಳು 20 ಸಾವಿರ ರೂಪಾಯಿಗಳಿಗೆ ನಾನು ಕೊಡುವುದಕ್ಕೆ ತಯಾರಿಲ್ಲ ನೀವು 1 ಲಕ್ಷ 25 ಸಾವಿರ ರೂಪಾಯಿಗಳನ್ನು ಕೊಟ್ಟರೆ ಮಾತ್ರ ಭೂಸ್ವಾಧೀನ ಪ್ರಕ್ರಿಯೆಗಳಲ್ಲಿ ನಾವು ಬರೆದುಕೊಡುತ್ತೇವೆಂಬ ಮಾತುಗಳನ್ನು ಹೇಳಿದರು ಈಗಾಗಲೇ ಈ ಇಲಾಖೆ ಒಂದು ಎಕರೆಗೆ 1 ಲಕ್ಷ 25 ಸಾವಿರ ರೂಪಾಯಿಯಂತೆ ಖರೀದಿಸುವುದಕ್ಕೆ ಅನುಮತಿಯನ್ನು ಕೂಡ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದವರು ಈಗಾಗಲೇ ಕೊಟ್ಟಿದ್ದಾರೆ ಮತ್ತು ಈಗಾಗಲೇ ಅವರು ಈ ವಿಚಾರವನ್ನು ತಿಳಿಸಿ, D C ಯವರಿಗೆ ಪತ್ರವನ್ನೂ ಬರೆದಿದ್ದಾರೆ 1 ಲಕ್ಷ 25 ಸಾವಿರ ರೂಪಾಯಿಯನ್ನು ಕೊಟ್ಟು ನೀವು ಖರೀದಿಸಿ ಎನ್ನುವ ಮಾತನ್ನು ಹೇಳಿದ್ದಾರೆ ಅದರ ಪ್ರಕ್ರಿಯೆ ಶುರುವಾಗಿದೆ ಈಗಾಗಲೇ ವಿಳಂಬವಾಗಿರತಕ್ಕಂಥಾದ್ದು ನಿಜವಾಗಿಯೂ ಆ ಗಡಿ ಪ್ರದೇಶದಲ್ಲಿ ವಿದ್ಯುತ್ ಯಾವಾಗಲೂ fluctuations ಆಗುತ್ತಿರುತ್ತದೆ ಅಲ್ಲಿ ಉತ್ತಮ ಗುಣಮಟ್ಟದಲ್ಲಿ three phases ನಲ್ಲಿ ವಿದ್ಯುತ್ ಕೊಡುವುದಕ್ಕಾಗುವುದಿಲ್ಲ ಆದ್ದರಿಂದ, ನಾನು ಕ್ರಮ ಕೈಗೊಳ್ಳುತ್ತೇನೆಂದು ಹೇಳಿ, ನಾನು ಅಧಿಕಾರಿಗಳೊಂದಿಗೆ ಮಾತನಾಡಿದ್ದೇನೆ 1 ಲಕ್ಷ 25 ಸಾವಿರ ರೂಪಾಯಿಗಳಿಗೆ ಖರೀದಿಸುವುದಕ್ಕೆ ತಾವು ಕೂಡ D C ಯವರ ಜೊತೆಗೆ ಬಂದು ಆ 4 ಎಕರೆಯನ್ನು ಮಾಡಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ

**ಶ್ರೀ ಪ್ರಕಾಶ್ ಖಂಡ್ರೆ** – ಜಮೀನು ಖರೀದಿ ವಿಷಯದಲ್ಲಿ ಈ ಪ್ರಸ್ತಾವನೆ ರೆವಿನ್ಯೂ ಮಂತ್ರಿಯವರ ಇಲಾಖೆಯಲ್ಲಿದೆ ಮಾನ್ಯ ಪ್ರಕಾಶ್‌ರವರು ರೆವಿನ್ಯೂ ಮಂತ್ರಿಯವರಿಗೆ ಹೇಳಲಿ ನಾನೂ request ಮಾಡುತ್ತೇನೆ ಸರ್ಕಾರದ ಮುಂದಿರುವ ಪ್ರಸ್ತಾವನೆಯನ್ನು approval ಮಾಡಿಕೊಟ್ಟರೆ ಒಳ್ಳೆಯದು

**ಶ್ರೀ ಎಂ ಪಿ ಪ್ರಕಾಶ್** – ಆಗಬಹುದು

**ರಾಜ್ಯದಲ್ಲಿರುವ I.F.S. ಅಧಿಕಾರಿಗಳು**

**149 (1254) ಶ್ರೀ ಕೆ ಆರ್ ರಮೇಶ್ ಕುಮಾರ್ (ಶ್ರೀನಿವಾಸಪುರ)** – ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಖಿಲ ಭಾರತ ಅರಣ್ಯ ಸೇವಾ ಶ್ರೇಣಿಯ (IFS) ಅಧಿಕಾರಿಗಳು ಎಷ್ಟು ಜನ ಸೇವೆ ಸಲ್ಲಿಸಿರುತ್ತಾರೆ,

ಆ) ಇವರಿಗಾಗಿ ಪ್ರತಿ ವರ್ಷ ಖರ್ಚಾಗುವ ಸಂಬಳ ಮತ್ತು ಇತರೆ ಭತ್ಯೆ ಎಷ್ಟು?

**ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯ ಮಂತ್ರಿಯವರು)**

ಅ) 161

| | |
|---|---|
| ಆ) ಸಂಬಳ (ಮೂಲ ವೇತನ) | 4,84,28,550 |
| ಇತರೆ ಭತ್ಯೆ | 1,78,41,873 |
| **ಒಟ್ಟು** | **6,62,70,423** |

**ಶ್ರೀ ಕೆ ಆರ್ ರಮೇಶ್ ಕುಮಾರ್** – 161 ಜನರಿದ್ದಾರೆಂದು ತಾವು ಹೇಳಿದ್ದೀರಿ ಒಂದು ವರ್ಷಕ್ಕೆ 6,62,70,423=00 ರೂಪಾಯಿಗಳು ಖರ್ಚಾಗುತ್ತದೆಂದು ಹೇಳಿದ್ದೀರಿ ನಮ್ಮ ರಾಜ್ಯಕ್ಕೆ ಈ IFS ಶ್ರೇಣಿಯ ಅಧಿಕಾರಿಗಳು ಎಷ್ಟು ಜನರು ಇರಬೇಕೆಂದು, ಇಷ್ಟು ಅಗತ್ಯವಿದೆಯೆಂದು ಹೇಳಿ, ಗುರ್ತಿಸಿ, ನಿಗದಿ ಮಾಡತಕ್ಕಂಥ ಅಧಿಕಾರ ರಾಜ್ಯ ಸರ್ಕಾರಕ್ಕಿದೆಯೇ? ಇಲ್ಲವೇ ಕೇಂದ್ರ ಸರ್ಕಾರಕ್ಕಿದೆಯೇ?

**ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು, ಅರಣ್ಯ ಸಚಿವರ ಪರವಾಗಿ)** – ಮಾನ್ಯ ಅಧ್ಯಕ್ಷರೆ, ನನಗೆ ತಿಳಿದ ಮಟ್ಟಿಗೆ IAS, IPS, All India Services ಅಧಿಕಾರಿಗಳು ನಮಗೆ ಎಷ್ಟು ಮಂದಿ ಅಗತ್ಯತೆ ಇದೆಯೆಂದು ರಾಜ್ಯ ಸರ್ಕಾರದ ಪತ್ರದ ಮೇಲೆ ಅವರ ನಿರ್ಧಾರ ಮಾಡಿ ಕಳುಹಿಸಿಕೊಡುತ್ತಾರೆ ಆ ಪ್ರಕಾರ ಇಲ್ಲಿ IFS ಅಧಿಕಾರಿಗಳು ಸೇರಿ 2,200 ಜನರು ಒಟ್ಟು All India Cadre ನಲ್ಲಿರುವವರು